**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 6/2014</u>**

ದಿನಾಂಕಃ 01.04.2021
ಸಾಕ್ಷಿಗೆ ಪ್ರಮಾಣ ವಚನ
ಬೋಧಿಸಲಾಯಿತು.

ಪ್ರಾ.ಸಾಃ 1 (ಚಾ.ಸಾ.1)

| | | |
|---|---|---|
| ಹೆಸರು | ಃ | ರಾಮದಾಸ್ |
| ಗಂಡನ ಹೆಸರು | ಃ | ದಾಸಪ್ಪ ಉಃ ದಾಸೇಗೌಡ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ವ್ಯವಸಾಯ/ಕಂಟ್ರಾಕ್ಟರ್ |
| ವಾಸ ಸ್ಥಳ | ಃ | ಕೋಮನಹಳ್ಳಿ |

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ</u>**

ಈ ಪ್ರಕರಣದ ದೂರು ಕೊಡುವ 5-6 ತಿಂಗಳ ಹಿಂದಿನಿಂದ ನಾನು ಕಂಟ್ರಾಕ್ಟ ಕೆಲಸ ಮಾಡಲು ಪ್ರಾರಂಭಿಸಿದ್ದೆ. ಚಾಸಾ.5 – ಸೌಮ್ಯ ನನ್ನ ತಂಗಿಯ ಮಗಳು. ಸದರಿಯ ಸೌಮ್ಯಳ ವಯಸ್ಸು ಈಗ 25 ವರ್ಷಗಳು. ಸೌಮ್ಯ ಬಿ.ಕಾಂ ಪದವೀಧರೆ. ನಾನು 2 ಅಥವಾ 3 ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಅಷ್ಟಾಗಿ ಬರುವುದಿಲ್ಲ.

2. ನಾನು ಕೋಮನಹಳ್ಳಿಯ ರೋಜ್ಗಾರ್ ಯೋಜನೆಯಡಿ ಚರಂಡಿ ಕೆಲಸದ ಕಾಂಟ್ರಾಕ್ಟ ಮಾಡಿಸುತ್ತಿದ್ದೆ. ರಾಂಪುರ ಗ್ರಾಮ ಪಂಚಾಯತಿಯಿಂದ ಸದರಿ ಕಂಟ್ರಾಕ್ಟನ್ನು ರೂ.1 ಲಕ್ಷಕ್ಕೆ 2012 ರಲ್ಲಿ ನನಗೆ ವಹಿಸಿದ್ದರು. ಕಂಟ್ರಾಕ್ಟ ವಹಿಸಿಕೊಟ್ಟಂತೆ ನಾನು ಚರಂಡಿಯ ಕೆಲಸವನ್ನು ಪೂರ್ತಿ ಮಾಡಿದೆ. ಆ ಸಮಯದಲ್ಲಿ ಬಸವಲಿಂಗಯ್ಯ ಅಂದರೆ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ರಾಂಪುರ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿದ್ದರು. ಕಂಟ್ರಾಕ್ಟ ಕೆಲಸ ಮುಗಿದ ನಂತರ ನಾನು 1 ನೇ ಆರೋಪಿಯನ್ನು ಭೇಟಿ ಮಾಡಿ ಕೆಲಸ ಮುಗಿದ ಬಗ್ಗೆ ಅವರಿಗೆ

ತಿಳಿಸಿದೆನು. ಆಗ 1ನೇ ಆರೋಪಿ ಬಿಲ್ ಮಾಡಿ ರೂ.65 ಸಾವಿರ 800 ಚಿಲ್ಲರೆ ಹಣ ಬ್ಯಾಂಕಿನಲ್ಲಿದ್ದ ಲೇಬರರ್ ಖಾತೆಗೆ ಜಮಾ ಮಾಡಿದರು. ನನಗೆ ಸದರಿ ಕಂಟ್ರಾಕ್ಟ ಬಾಬ್ತು ರೂ.28 ಸಾವಿರ ಚಿಲ್ಲರೆ ಹಣ ಪಂಚಾಯತಿಯಿಂದ ಬರಬೇಕಾಗಿತ್ತು. ಸದರಿ ರೂ.28 ಸಾವಿರ ಚಿಲ್ಲರೆ ಹಣದ ಬಗ್ಗೆ ಕಾರ್ಯದರ್ಶಿ - ಬಸವಲಿಂಗಯ್ಯರವರನ್ನು ಕೇಳಿದಾಗ ರೂ.1 ಲಕ್ಷದ ಶೇಕಡಾ 16ರಷ್ಟು ಹಣವನ್ನು ಪಂಚಾಯತಿಗೆ ಕೊಡಬೇಕೆಂದು ಕೇಳಿದರು. ಆಗ ನಾನು ಅಷ್ಟು ಕೊಡಲು ಆಗುವುದಿಲ್ಲ, ಕಮ್ಮಿ ಮಾಡಿಕೊಳ್ಳಿ ಎಂದು 1ನೇ ಆರೋಪಿಗೆ ಹೇಳಿದೆನು. ಆ ಸಮಯದಲ್ಲಿ ನನ್ನ ಬಳಿ ಎಂಟಿಎಸ್ ಕಂಪನಿಯ ಮೊಬೈಲ್ ಇದ್ದಿತು. ಆ ದಿನ 1ನೇ ಆರೋಪಿಯೊಂದಿಗೆ ಮಾತನಾಡಲು ನಾನು ಹೋಗಿದ್ದಾಗ ನನ್ನೊಂದಿಗೆ ನನ್ನ ತಂಗಿಯ ಮಗಳು ಸೌಮ್ಯಳನ್ನು ಕರೆದುಕೊಂಡು ಹೋಗಿದ್ದೆ. ನನ್ನ ಮತ್ತು 1ನೇ ಆರೋಪಿಯ ನಡುವಿನ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ನಾನು ಆ ದಿನ ಸೌಮ್ಯಳನ್ನು ನನ್ನೊಂದಿಗೆ ಕರೆದುಕೊಂಡು ಹೋಗಿದ್ದೆ. ನನ್ನ ಮತ್ತು 1ನೇ ಆರೋಪಿಯ ನಡುವಿನ ಆ ದಿನದ ಸಂಭಾಷಣೆಯನ್ನು ನನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಲಾಯಿತು. ಸದರಿ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವುದನ್ನು ನನ್ನ ತಂಗಿಯ ಮಗಳಾದ ಸೌಮ್ಯ ನನಗೆ ಆ ದಿನ ಹೇಳಿಕೊಟ್ಟಿದ್ದಳು.

3. ಮರುದಿನ ನಾವು ಲೋಕಾಯುಕ್ತ ಕಚೇರಿಗೆ ಹೋದೆವು. ನನ್ನೊಂದಿಗೆ ಕೆಲಸ ಮಾಡಿದ ನಾಲ್ಕು ಜನ ಆ ದಿನ ಲೋಕಾಯುಕ್ತ ಕಚೇರಿಗೆ ಬಂದಿದ್ದರು. ನಾನು ಮೊಬೈಲ್‌ನ್ನು ಹಾಗು ದೂರನ್ನು ಲೋಕಾಯುಕ್ತ ಪೊಲೀಸರಿಗೆ ಕೊಟ್ಟೆನು. ದೂರನ್ನು ನನ್ನ ತಂಗಿಯ ಮಗಳು ಸೌಮ್ಯ ಬರೆದಿದ್ದು, ನಾನು ಅದಕ್ಕೆ ಸಹಿ ಮಾಡಿಕೊಟ್ಟೆನು. ಆ ದೂರನ್ನು ನೋಡಿದರೆ ಗುರುತಿಸಬಲ್ಲೆ. ದೂರನ್ನು ಹಾಗು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ದೂರನ್ನು ಈಗ ನಿಪಿ.1 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

4. ನಾನು ದೂರು ಕೊಟ್ಟ ನಂತರ ಲೋಕಾಯುಕ್ತ ಪೊಲೀಸರು ಬೇರೆ ಇಲಾಖೆಯ ಮಹಾದೇವ ಹಾಗು ಮಂಜು ಎನ್ನುವವರನ್ನು ಕರೆಸಿದರು. ಅವರುಗಳು ಲೋಕಾಯುಕ್ತ ಕಚೇರಿಗೆ ಬಂದಾಗ ಸಮಯ ಮಧ್ಯಾಹ್ನ 3.30 ಆಗಿತ್ತು. ಲೋಕಾಯುಕ್ತ ಪೊಲೀಸರು ನಾನು ಯಾರು ಎನ್ನುವ ಬಗ್ಗೆ ಸದರಿ ಮಹಾದೇವ

ಹಾಗು ಮಂಜುರವರಿಗೆ ತಿಳಿಸಿದರು. ನನ್ನ ಮೊಬೈಲ್‌ನ್ನು ಗ್ರಾಮದವರು ತೆಗೆದುಕೊಂಡರು ಆದರೆ ವಾಪಸ್ಸು ಕೊಡಲಿಲ್ಲ.

**(ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**